ಓಎಸ್ ಃ482/2012

**O.S. No.482/2012**

**ಡಿ.ಡಬ್ಲ್ಯೂ-2**

ದಿನಾಂಕಃ 06-06-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ ಎಸ್ ಎಸ್ ಐ., ವಕೀಲರಿಂದಃ

ನನಗೆ ಓದಲು ಮತ್ತು ಬರೆಯಲು ಬರೆವುದಿಲ್ಲ ಎಂದರೆ ಸರಿ. ಪ್ರತಿವಾದಿ ನನ್ನ ತಾಯಿ ಆಗಬೇಕು. ವಾದಿ ಮತ್ತು ಪ್ರತಿವಾದಿಯರ ನಡುವೆ ಉಂಟಾಗಿರುವ ವ್ಯವಹಾರದ ಕುರಿತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಪ್ರತಿವಾದ ಪತ್ರದಲ್ಲಿರುವ ಮತ್ತು ನನ್ನ ಮುಖ್ಯವಿಚಾರಣೆಯಲ್ಲಿರುವ ಅಂಶಗಳ ಕುರಿತು ಮಾಹಿತಿ ಇರುವುದಿಲ್ಲ. ನನಗೆ ಓದಲು ಬರುವುದಿಲ್ಲ. ನಾನು ಕನ್ನಡವನ್ನು ಚೆನ್ನಾಗಿ ಮಾತನಾಡುತ್ತೆನೆ ಮತ್ತು ಮನೆಯಲ್ಲಿ ಕನ್ನಡ ಮಾತನಾಡುತ್ತೆವೆ. ನಮ್ಮ ಮಾತೃ ಭಾಷೆ ಕನ್ನಡ ಇರುತ್ತದೆ. ಈ ಹಿಂದಿನ ಮುದ್ದತ್ ದಿನಾಂಕದಂದು ನನ್ನ ತಾಯಿ ಮತ್ತು ನನ್ನ ಸಹೋದರಿಯರು ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ ಮತ್ತು ಕಿವಿ ಕೇಳಿಸುವುದಿಲ್ಲ ಹಾಗೂ ನಡೆದಾಡಲು ಬರುವುದಿಲ್ಲ ಎಂದರೆ ಸರಿ. ನನ್ನ ತಾಯಿಗೆ ಈ ರೀತಿಯ ಸಮಸ್ಯೆ ಉಂಟಾಗಿ ಸುಮಾರು 7 ರಿಂದ 8 ವರ್ಷಗಳು ಆಗಿರುತ್ತವೆ. ಈರೀತಿ ಸಮಸ್ಯೆ ಇರುವುದರಿಂದ ಎಲ್ಲಿ  ಮತ್ತು ಏನೂ ಕೆಲಸ ಮಾಡುತ್ತಿದ್ದಾರೆ ಎಂದು ಅವರಿಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ನಮ್ಮ ತಂದೆಯ ಹೆಸರು ಹಸನ್ ಸಾಬ್ ಇರುತ್ತದೆ. ಸದ್ಯ ನನ್ನ ತಂದೆ ಮರಣ ಹೊಂದಿ ಸುಮಾರು 20 ವರ್ಷಗಳು ಆಗಿರಬಹುದು ಮತ್ತು ಅವರು ನಾನು ಚಿಕ್ಕವನಿರುವಾಗಲೆ ಮರಣ ಹೊಂದಿರುತ್ತಾರೆ. ನಮ್ಮ ತಂದೆ ಮರಣ ಹೊಂದುವ ಪೂರ್ವದಲ್ಲಿ ನಮ್ಮ ಮನೆಯ ಹಿರಿತನವನ್ನು ನನ್ನ ಅಣ್ಣ ಮಾಡುತ್ತಿದ್ದನು. ನನ್ನ ಅಣ್ಣನ ಹೆಸರು ಕಲಿಲ್ ಸಾಬ್ ತಂದೆ ಹಸನ್ ಸಾಬ್ ಬಣ್ಣೂರು ಇರುತ್ತದೆ. ನಮ್ಮ ಮನೆಯ ಸಂಪೂರ್ಣ ಹಿರಿಯತನವನ್ನು ನನ್ನ ಅಣ್ಣ ಮಾಡುತ್ತಿದ್ದನು. ನನ್ನ ಅಣ್ಣ ಶಾಲೆ ಕಲಿತಿರುವುದಿಲ್ಲ

ಕೇವಲ ಸಹಿ ಮಾಡುತ್ತಿದ್ದನು ಎಂದರೆ ಸಹಿ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದ್ಯ ನನ್ನ ಅಣ್ಣ ಮರಣ ಹೊಂದಿರುತ್ತಾರೆ. ನನ್ನ ಅಣ್ಣ ಸುಮಾರು 10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ಅಣ್ಣನ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿರಬಹುದು ಆದರೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ತಾಯಿಗೆ ಒಟ್ಟು ಇಬ್ಬರು ಗಂಡು ಮಕ್ಕಳು ಮತ್ತು ಐದು ಜನ ಸಹೋದರಿಯರು ಇರುತ್ತೆವೆ ಇವರ ಪೈಕಿ ನನ್ನ ಅಣ್ಣ ಕಲಿಲ್ ಸಾಬ್ ಮರಣ ಹೊಂದಿರುತ್ತಾರೆ. ಹೆಣ್ಣುಮಕ್ಕಳ ಪೈಕಿ ಮೂರು ಜನ ಮದುವೆಯಾಗಿದ್ದು ಅವರು ತಮ್ಮ ಗಂಡನ ಮನೆಯಲ್ಲಿ ವಾಸವಿರುತ್ತಾರೆ. ನಾನು ಸದ್ಯ ಒಟ್ಟು ಕುಟುಂಬದಲ್ಲಿ ನಾನು ನನ್ನ ತಾಯಿ ವಾಸವಿರುತ್ತೆವೆ. ನಮ್ಮ ಅಣ್ಣ ಮರಣದ ನಂತರ ಮನೆಯ ಹಿರಿಯತನವನ್ನು ನಾನೆ ಮಾಡುತ್ತಿದ್ದೆನೆ. ನನ್ನ ಅಣ್ಣ ಮರಣದ ನಂತರ ಸುಮಾರು 5 ರಿಂದ 6 ವರ್ಷಗಳಿಂದ ನಾನು ಮನೆಯ ಹಿರಿಯತನವನ್ನು ಮಾಡುತ್ತಿದ್ದೆನೆ. ನಾನು ಕೂಲಿ ಕೆಲಸ ಮಾಡಿ ನಮ್ಮ ಕುಟುಂಬವನ್ನು ಜೀವನ ಸಾಗಿಸುತ್ತಿದ್ದೆನೆ. ನಮಗೆ ಆರ್ಥಿಕವಾಗಿ ಬಡತನ ಇರುತ್ತದೆ ಎಂದರೆ ಸರಿ. ಮೊದಲಿನಿಂದಲೂ ಆರ್ಥೀಕ ಬಡತನವನ್ನು ಎದುರಿಸುತ್ತಿದ್ದೆವೆ ಎಂದರೆ ಸರಿ. ನಾನು ದಿನಗೂಲಿ ಆಧಾರದ ಮೇಲೆ ಕೂಲಿ ಕೆಲಸ ಮಾಡುತ್ತೆನೆ. ನಮ್ಮ ಕುಟುಂಬಕ್ಕೆ ಅಷ್ಟೊಂದು ಆದಾಯ ಇರುವುದಿಲ್ಲ.

2. ಈ ದಾವೆಯನ್ನು ಯಾರೂ ಯಾರ ಮೇಲೆ ಏಕೆ ಹೂಡಲಾಗಿರುತ್ತದೆ ನನಗೆ ಗೊತ್ತಿರುವುದಿಲ್ಲ. ನನಗೆ ನ್ಯಾಯಾಲಯದಿಂದ ನೋಟಿಸ್ಸು ಬಂದ ನಂತರ ನನಗೆ ಗೊತ್ತಾಗಿರುತ್ತದೆ. ಎಷ್ಟು ವರ್ಷಗಳ ಹಿಂದೆ ನೋಟಿಸ್ಸು ಬಂದಿರುತ್ತದೆ ನನಗೆ ಗೊತ್ತಿಲ್ಲ. ಸದರಿ ನೋಟಿಸ್ಸನ್ನು ಯಾರೂ ನನಗೆ ಕಳುಹಿಸಿರುತ್ತಾರೆ ಮತ್ತು ಏಕೆ ಕಳುಹಿಸಿರುತ್ತಾರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ನಮೂದಿಸಿರುವ ಪ್ರತಿವಾದಿಯ ವಿಳಾಸ ನನ್ನ ವಿಳಾಸವಾಗಿರುತ್ತದೆ ಎಂದರೆ ಸರಿ. ಸದರಿ ವಿಳಾಸಕ್ಕೆ ಎಮ್ ಎಸ್ ದಂಡಿನ ವಕೀಲರು ದಿನಾಂಕ:4.06.2012 ರಂದು ನೋಟಿಸ್ಸು ಕಳುಹಿಸಿದ ನಂತರ ನನಗೆ ಮಾಹಿತಿ ಗೊತ್ತಾಗಿರುತ್ತದೆ ಎಂದರೆ ಸರಿ. ಸದರಿ

ನೋಟಿಸ್ಸಗೆ ನಾನು ಪ್ರತ್ಯುತ್ತರ ನೀಡಿರುವುದಿಲ್ಲ. ದಾವಾ ಆಸ್ತಿಯ ನಂಬರಃ461, ವಾರ್ಡ ನಂಬರಃ17, ವೀಸ್ತಿರ್ಣ 30 ಇಂಟು 30 ಅಡಿ ಇರುತ್ತದೆ ಎಂದರೆ ಸರಿ. ಸದರಿ ಮನೆಯ ಚೆಕ್ಕಬಂದಿಯ ಪೈಕಿ ಪೂರ್ವಕ್ಕೆಃಬನ್ನೂರುಸಾಬ್ ರವರ ಮನೆ, ಪಶ್ಚಿಮಕ್ಕೆಃಮಲ್ಲಪ್ಪ ಬಿಳಿಗುಡ್ಡರವರ ಮನೆ, ಉತ್ತರಕ್ಕೆಃಹುಲಗಪ್ಪ ಹರಿಜನರವರ ಜಾಗ ಮತ್ತು ದಕ್ಷಿಣಕ್ಕೆಃರಸ್ತೆ ಬರುತ್ತದೆ ಎಂದರೆ ಸರಿ. ಸದರಿ ಚೆಕ್ಕಬಂದಿಯ ದಾವಾ ಆಸ್ತಿಯು ನನ್ನ ತಾಯಿಯ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ನಮ್ಮ ಚಿಕ್ಕಪ್ಪ ಹೇಳಿರುತ್ತಾರೆ. ಸದರಿ ವಿಷಯವು ನಾನು ಎಂಟು ವರ್ಷವನಿದ್ದಾಗ ನಮ್ಮ ಚಿಕ್ಕಪ್ಪ ನನಗೆ ಹೇಳಿರುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ವಾದಿಯ ಪರಿಚಯ ನನಗೆ ಇರುತ್ತದೆ. ನಿಪಿ-1 ರಲ್ಲಿರುವ ತನ್ನ ತಾಯಿಯ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಮತ್ತು ಅದೆ ರೀತಿ ವಾದಿಯ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಎರಡು ಭಾವಚಿತ್ರಗಳನ್ನು ವಾದಿಯ ಪರವಾಗಿ ನಿಪಿ-1**(ಎಫ)** ಮತ್ತು ನಿಪಿ-1**(ಜಿ)** ಎಂದು ಗುರುತಿಸಲಾಯಿತು. ನನ್ನ ತಾಯಿಯು ಶಾಲೆ ಕಲಿತಿರುವುದಿಲ್ಲ ಹೆಬ್ಬಟ್ಟಿನ ಸಹಿ ಮಾಡುತ್ತಾರೆ ಎಂದರೆ ಸರಿ. ತನ್ನ ತಾಯಿಯ ಹೆಬ್ಬಟ್ಟಿನ ಸಹಿಯನ್ನು ಗುರುತಿಸಿರುತ್ತಾರೆ. ಎರಡು ಹೆಬ್ಬಟ್ಟಿನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ವಾದಿಯ ಪರವಾಗಿ ನಿಪಿ-1**(ಹೆಚ್)** ಎಂದು ಗುರುತಿಸಲಾಯಿತು. ನಿಪಿ-1 ದಾಖಲೆಯನ್ನು ಇದೆ ಮೂದಲ ಬಾರಿಗೆ ನೋಡುತ್ತಿದ್ದೆನೆ ಈ ಮೊದಲು ನನಗೆ ಗೊತ್ತಿರಲಿಲ್ಲ. ನಿಪಿ-1 ದಾಖಲೆಯಲ್ಲಿನ ಮಾಹಿತಿಯ ಕುರಿತು ನನ್ನ ತಾಯಿ ಯಾವುದೆ ರೀತಿ ಮಾಹಿತಿ ನೀಡಿರುವುದಿಲ್ಲ. ನಿಡಿ-4 ರಲ್ಲಿನ ಅಂಶಗಳ ಕುರಿತು ನನಗೆ ಸರಿಯಾದ ಮಾಹಿತಿ ಇರುವುದಿಲ್ಲ. ಅದೆ ರೀತಿ ಅದನ್ನು ಯಾರು ತಯಾರಿಸಿರುತ್ತಾರೆ ಮತ್ತು ಯಾವ ಉದ್ದೇಶಕ್ಕಾಗಿ ತಯಾರಿಸಿರುತ್ತಾರೆ ನನಗೆ ಗೊತ್ತಿಲ್ಲ. ಅದೆ ರೀತಿಯಾಗಿ ನಿಡಿ-4 ಕ್ಕೆ ಯಾರೂ ಮಾಹಿತಿ ನೀಡಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ವಿಷಯಗಳ ಕುರಿತು ನನಗೆ ಮಾಹಿತಿ ಇರುವುದಿಲ್ಲ

ಕಾರಣ ನನಗೆ ಓದಲು ಬರುವುದಿಲ್ಲ. ನನ್ನ ಮುಖ್ಯವಿಚಾರಣೆಗೆ ಯಾರೂ ಮಾಹಿತಿ ನೀಡಿರುತ್ತಾರೆ ನನಗೆ ಗೊತ್ತಿಲ್ಲ. ನನಗೆ ಸಾಕ್ಷಿ ನುಡಿಯಲು ಹೇಳಿರುವುದರಿಂದ ಅದರಂತೆ ಸಾಕ್ಷಿ ನುಡಿಯುತ್ತಿದ್ದೆನೆ. ವಾದಿಯ ಪರಿಚಯ ಈ ಮೊದಲು ನನಗೆ ಇರುವುದಿಲ್ಲ. ಅದೆ ರೀತಿ ವಾದಿಯನ್ನು ನಾನು ನೋಡಿರುವುದಿಲ್ಲ. ಅವರು ಏನೂ ಕೆಲಸ ಮಾಡುತ್ತಾರೆ ಮತ್ತು ಎಲ್ಲಿ ವಾಸವಿರುತ್ತಾರೆ ನನಗೆ ಗೊತ್ತಿಲ್ಲ. ಅದೆ ರೀತಿ ಪಿಡಬ್ಲೂ-2 ರವರ ಪರಿಚಯ ಇರುವುದಿಲ್ಲ ಮತ್ತು ಅವರನ್ನು ನಾನು ನೋಡಿರುವುದಿಲ್ಲ.

3. ದಾವಾ ಆಸ್ತಿಯು ಮೂಲತಃ ಯಾರಿಂದ ಯಾರ ಹೆಸರಿಗೆ ವರ್ಗಾವಣೆಯಾಗಿದ್ದರ ಕುರಿತು ದಾಖಲೆಯನ್ನು ನಾನು ನೋಡಿರುವುದಿಲ್ಲ ಮತ್ತು ಆ ವಿಷಯವು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯು ನನ್ನ ತಾಯಿಯ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಲಿಲ್ ಸಾಬ್ ತಂದಿ ಹಸನ್ ಸಾಬ್ ಬನ್ನೂರು ನನ್ನ ಖಾಸಾ ಸಹೋದರ ಎಂದರೆ ಸರಿ. ನನ್ನ ಸಹೋದರ ಯಾವ ರೀತಿ ಸಹಿ ಮಾಡುತ್ತಿದ್ದನು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿನ ಮಾಹಿತಿ ಮತ್ತು ದಾಖಲೆಗಳ ಕುರಿತು ನನಗೆ ಮಾಹಿತಿ ಇರುವುದಿಲ್ಲ. ನನ್ನ ತಾಯಿಯು ದಾವಾ ಆಸ್ತಿಯನ್ನು ವಾದಿಯ ಪರವಾಗಿ ಖರೀದಿ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1/ಖರೀದಿ ಕರಾರು ಪತ್ರದನ್ವಯ ಪಂಚರರ ಸಮಕ್ಷಮ ರೂ.2,50,000/ ಗಳನ್ನು ಮುಂಗಡ ಹಣವಾಗಿ ಸ್ವೀಕರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯು ದಾಖಲೆಗಳನ್ನು ಪರಿಶೀಲಿಸಿ ನನ್ನ ತಾಯಿಯೊಂದಿಗೆ ನಿಪಿ-1 ರಂತೆ ವ್ಯವಹಾರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಕರಾರುನಂತ ನನ್ನ ತಾಯಿ ಖರೀದಿ ಪತ್ರವನ್ನು ಬರೆದುಕೊಡದೆ ಇರುವ ಕಾರಣ ವಾದಿಯ ತನ್ನ ವಕೀಲರ ಮೂಲಕ ನನ್ನ ತಾಯಿಗೆ ನೋಟಿಸ್ಸು ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ಕರಾರು ಉಪಬಂಧಗಳನ್ನು ಪಾಲಿಸುವಲ್ಲಿ ನನ್ನ ತಾಯಿ ವಿಫಲರಾಗಿದ್ದರಿಂದ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ನನ್ನ ತಾಯಿಯು

ಹೊಣೆಗಾರಳು ಆಗಿದ್ದು ಅದನ್ನು ತಪ್ಪಿಸುವ ಸಲುವಾಗಿ ನಾನು ಸಾಮಾನ್ಯ ಮುಕ್ತಿಯಾರನಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನವನ್ನು ನೀಡಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸರಿ ಇದೆ.
ನನ್ನ ಸಮಕ್ಷಮ
ಸಹಿ/- 06.08.2026
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ.